## ನೆನಪಿನ ಕಲ್ಲುಗಳು (Memorial stones)

ಭಾರತದ ಸಮಾಜದಲ್ಲಿ ಸಮಾಜಕ್ಕಾಗಿ ಮರಣಿಸಿದವರನ್ನು ನೆನಪಿಸಿಕೊಳ್ಳುವುದು ರೂಢಿ. ಮರಣ ಎಲ್ಲರಿಗೂ ಒಂದೇ ಆದರೂ ಊರಿನ, ದೈವದ, ರಾಜನ ಕಾರಣಕ್ಕಾಗಿ ಹೋರಾಡುವುದು, ಮಡಿಯುವುದು ಸಾಮಾಜಿಕವಾಗಿ ಒಪ್ಪಿದ್ದ ನಿಯಮಗಳು. ಪತಿಭಕ್ತಿಯ ಮೆರೆದಾಟದಲ್ಲಿ ಪತಿ ಸತ್ತಾಗ ಅವನೊಂದಿಗೆ ಸಹಗಮನ ಮಾಡುವುದೂ ಹಿಂದಿನ ಕಾಲದಲ್ಲಿ ಸಮಾಜ ಒಪ್ಪಿದ್ದ ಒಂದು ನಿಯಮ. ಇಲ್ಲಿ ಕಾರಣಕ್ಕಾಗಿ ಸಾಯುವುದು ಆತ್ಮಹತ್ಯೆಯಲ್ಲ. ಅದು ತ್ಯಾಗ ಹಾಗೂ ಬಲಿದಾನ. ನಮ್ಮ ಕಾವ್ಯಗಳಲ್ಲಿ, ಶಾಸನಗಳಲ್ಲಿ, ಜಾನಪದ ಕಥೆಗಳಲ್ಲಿ ಈ ರೀತಿ ಹೋರಾಡಿದ, ಹೋರಾಡಿ ಸತ್ತ ವ್ಯಕ್ತಿಗಳ ಗುಣಗಾನವೇ ಇದೆ. ಹೀಗೆ ಸತ್ತವರು ದೈವಾಂಶಪುರುಷರಾದ್ದರಿಂದ ಸಮಾಜ ಇವರ ನೆನಪಿನಲ್ಲಿ ಕಲ್ಲನ್ನು ನೆಡುತ್ತಿತ್ತು. ಇಂತಹ ಕಲ್ಲುಗಳೇ ನೆನಪಿನ ಕಲ್ಲುಗಳು.

ನೆನಪಿನ ಕಲ್ಲುಗಳ ಸಾಲಿನಲ್ಲಿ ಅನೇಕ ಮಾದರಿ ವಿಂಗಡಣೆಗಳಿವೆ. 1. ವೀರಗಲ್ಲು, 2. ಮಾಸ್ತಿ, 3. ಕೀಳ್ಗುಂಟೆ, 4. ಸಿಡಿತಲೆ, 5. ಧಾರ್ಮಿಕ. ವೀರಗಲ್ಲುಗಳಲ್ಲಿ ವೀರರು ಸತ್ತ ಕಾರಣವನ್ನು ಗುರುತಿಸಿ ಅದನ್ನು ಮತ್ತೆ ಆರು ವಿಭಾಗಗಳಾಗಿ ವಿಂಗಡಿಸಬಹುದು. 1. ಯುದ್ಧ, 2. ಊರಳಿವು, 3. ಗಡಿಕಾಳಗ, 4. ಗೋಗ್ರಹಣ, 5. ಅತ್ಯಾಚಾರ, 6. ಬೇಟೆ. ಈ ಎಲ್ಲಾ ಸಂದರ್ಭಗಳಲ್ಲಿ ಸತ್ತಿರುವುದು ಸಾಮಾಜಿಕ ಕಾರಣಗಳಿಗಾಗಿಯೇ.

ವೀರಗಲ್ಲುಗಳಲ್ಲಿ ಬರುವ ಒಂದು ಸಂಸ್ಕೃತ ಶ್ಲೋಕ ಹೀಗಿದೆ:

ಜಿತೇನ ಲಭ್ಯತೇ ಲಕ್ಷ್ಮೀರ್ಮೃತೇನಾಪಿ ಸುರಾಂಗನಾ

ಕ್ಷಣವಿಧ್ವಂಸಿನಿ ಕಾಯೇ ಕಾ ಚಿಂತಾ ಮರಣೇರಣೇಃ

[(ಯುದ್ಧದಲ್ಲಿ ಗೆದ್ದರೆ ಸಂಪತ್ತು ದೊರೆಯುತ್ತದೆ. ಸತ್ತರೆ ಸುರಾಂಗನೆಯರು ದೊರೆಯುತ್ತಾರೆ. ಕ್ಷಣದಲ್ಲಿ ನಾಶವಾಗುವ ಈ ಕಾಯ(ದೇಹ)ವನ್ನು ರಣರಂಗದಲ್ಲಿ ತ್ಯಜಿಸಲು ಏಕೆ ಚಿಂತೆ ಮಾಡುವೆ]

ಬಾದಾಮಿಯ ಶಾಸನದಲ್ಲಿ ಬರುವ ಸಂಸ್ಕೃತಶ್ಲೋಕ ಹೀಗಿದೆ:

ವರನ್ತೇಜಸ್ವಿನೋ ಮೃತ್ಯುರ್ನತು ಮಾನಾವಖಣ್ಡನಮ್ । ಮೃತ್ಯುಸ್ತನ್

ಕ್ಷಣಿಕೋ ದುಃಖಮ್ಮಾನ ಭಂಗಂ ದಿನೇ ದಿನೇ

[ಇದರ ಸಾರಾಂಶ ಹೀಗಿದೆ: ನಿಜವಾದ ತೇಜಸ್ವಿಯಾದವನು ಮೃತ್ಯುವನ್ನು ಸ್ವೀಕರಿಸುತ್ತಾನೆಯೇ ವಿನಃ ಮಾನಹರಣವನ್ನಲ್ಲ. ಏಕೆಂದರೆ ಸಾವು ಕ್ಷಣಾರ್ಧದಲ್ಲಿ ಸಂಭವಿಸುತ್ತದೆ. ಆದರೆ ದುಃಖ ಮತ್ತು ಮಾನಭಂಗಗಳು ದಿನದಿನವೂ (ಸಾಯಿಸುತ್ತವೆ)]

ಇದನ್ನೇ 10ನೆಯ ಶತಮಾನದಲ್ಲಿದ್ದ ರನ್ನ ಎಂಬ ಕವಿಯು ತನ್ನ ಕಾವ್ಯ 'ಗದಾಯುದ್ಧ' ಅಥವಾ 'ಸಾಹಸಭೀಮವಿಜಯ' ಎಂಬ ಕೃತಿಯಲ್ಲಿ

ತುರುಗೋಳೊಳ್ ಪೆಣ್ಬುಯ್ಯಲೊ । ಳೆರವೆಸದೊಳ್ ನಂಟನೆಡರೊಳೂ

ರಳಿವಿನೊಳಂ । ತರಿಸಂದು ಗಂಡುತನಮನೆ । ನೆರೆ ಪದವಂ ಗಂಡನಲ್ಲನೆಂತುಂ ಷಂಡಂ ॥

ಅಂದರೆ, 'ಹಸುಗಳನ್ನು ಕದಿಯುವಲ್ಲಿ, ಹೆಂಗಸರ ಮಾನಭಂಗವಾಗುವಲ್ಲಿ, ದ್ರೋಹ ನಡೆಯುವಲ್ಲಿ, ನೆಂಟನ ಕಷ್ಟದಲ್ಲಿ, ಊರಿನ ಮೇಲೆ ದಾಳಿ ನಡೆಯುವಲ್ಲಿ ಮುಂದೆ ಬಂದು ಶೌರ್ಯವನ್ನು ತೋರಿಸದವನು ಶೂರನೇ ಅಲ್ಲ. ಅವನೊಬ್ಬ ನಪುಂಸಕ' ಎಂದಿದ್ದಾನೆ.

ಇಂತಹ ಸಾಮಾಜಿಕ ಮೌಲ್ಯಗಳ ಹಿನ್ನೆಲೆಯಲ್ಲಿ ಈ ನೆನಪಿನ ಕಲ್ಲುಗಳನ್ನು ನಾವು ನೋಡಬೇಕಾಗಿದೆ. ಈಗನ ಮೌಲ್ಯಗಳನ್ನು ಆಧಾರವಾಗಿ ಇಟ್ಟುಕೊಂಡು ಅವನ್ನು ನೋಡುವುದು ಸರಿಯಲ್ಲ.

ಕರ್ನಾಟಕ ಹಾಗೂ ಅದರ ಪ್ರಭಾವ ವಲಯವಿರುವ, ತಮಿಳುನಾಡು, ಆಂಧ್ರಪ್ರದೇಶ, ಮಹಾರಾಷ್ಟ್ರಗಳಲ್ಲಿ ಈ ಬಗೆಯ ವೀರಗಲ್ಲುಗಳು ದೊರೆಯುತ್ತವೆ. ಭಾರತದ ಉಳಿದ ಕಡೆ ಇಂತಹ ವಿಶಿಷ್ಟ ಹಾಗೂ ವಿಭಿನ್ನ ನೆನಪಿನ ಕಲ್ಲುಗಳು ದೊರೆಯುವುದಿಲ್ಲ. ಹೀಗಾಗಿ ಈ ಬಗೆಯ ಕಲ್ಲುಗಳು ಕರ್ನಾಟಕದ ಸಂಸ್ಕೃತಿಯ ವಿಶಿಷ್ಟ ಕುರುಹುಗಳು.

ಯುದ್ಧ: ಮನುಷ್ಯನಾಗಲೀ ಪ್ರಾಣಿಯಾಗಲೀ ಮರವಾಗಲೀ, ಪಕ್ಷಿಯಾಗಲೀ, ಯಾವುದೇ ಜೀವವಿರುವ ಪ್ರಾಣಿ ತಾವು ಉಳಿದುಕೊಳ್ಳಲು ಅನುಸರಿಸುವ ತಂತ್ರದ ಭಾಗವೇ ಜಗಳ. ಈ ಜಗಳ ಒಬ್ಬರನ್ನು ಅಥವಾ ಒಂದನ್ನು ತುಳಿದು/ತಿಂದು ಉಳಿದುಕೊಳ್ಳುವುದು. ಮುಂದೆ ಕುಲಗಳಾಗಿ ವಿಂಗಡಣೆಯಾದಾಗ ಬೇರೆ ಕುಲದವರ ಮೇಲೆ ತಮ್ಮ ಅಸ್ತಿತ್ವ ಸ್ಥಾಪಿಸುವ ಕೆಲಸಕ್ಕೆ ಕೈಹಾಕಿದರು. ಹೀಗೆ ಇತರೆ ಕುಲಗಳ ಮೇಲೆ ತಮ್ಮ ಪಾರಮ್ಯವನ್ನು ಸ್ಥಾಪಿಸುವ ಕ್ರಿಯೆಯಲ್ಲಿ ನಡೆಸುವ ಜಗಳವೇ ಯುದ್ಧ. ಸಾಮ್ರಾಜ್ಯ ವಿಸ್ತರಣೆಯಲ್ಲಿಯೂ ಇದೇ ಪ್ರಮುಖ ಅಂಗ. ಯುದ್ಧವೆಂದರೆ ಗೆಲವು–ಮರಣ ಇವೆರಡರಲ್ಲಿ ಒಂದಾಗಬೇಕು.

**ಬೆಳತೂರು ಮಾಸ್ತಿಶಾಸನ ಮತ್ತು ಶಿಲ್ಪ (Sculpture and inscription of pire of Beleturu)**

ಕರ್ನಾಟಕದಲ್ಲಿ ಅಥವಾ ಭಾರತದಲ್ಲಿ ಕೆಲವು ಹೆಂಗಸರು ಗಂಡನ ಸಾವಿನ ನಂತರ ಚಿತೆಗೆ (ಉರಿಯುತ್ತಿದ್ದ ಅಗ್ನಿಕುಂಡಕ್ಕೆ) ಬಿದ್ದು ಪ್ರಾಣಾರ್ಪಣೆ ಮಾಡಿಕೊಳ್ಳುತ್ತಿದ್ದರು. ಈ ಪ್ರಕ್ರಿಯೆಯನ್ನು ಮಾಸ್ತಿ ಎಂದು ಕರೆಯುತ್ತೇವೆ. ಉತ್ತರ ಭಾರತದಲ್ಲಿ ಸಾಮೂಹಿಕ ಪ್ರಾಣಾರ್ಪಣೆ ಮಾಡುತ್ತಿದ್ದ ಪದ್ಧತಿಯನ್ನು ಜೋಹರ್ ಎಂದು ಕರೆಯುತ್ತಾರೆ. ಆದರೆ ಕರ್ನಾಟಕದಲ್ಲಿ ಜೋಹರ್ ಇದ್ದ ಬಗ್ಗೆ ನಮಗೆ ಶಾಸನಗಳಲ್ಲಿ ಯಾವುದೇ ಉಲ್ಲೇಖಗಳು ದೊರೆತಿಲ್ಲ.

ಇಂತಹ ಮಾಸ್ತಿಯ ಬಗ್ಗೆ ಸಾಹಿತ್ಯಿಕವಾಗಿ ವಿವರಗಳನ್ನು ನೀಡುವ ಬೆಳತೂರು ಶಾಸನವು ಶಾಸನ ಪ್ರಪಂಚದಲ್ಲೇ ಅಪರೂಪವಾದದ್ದು. ನುಗುನಾಡಿನ ರಾಜ ರವಿಗನ ಮಗಳು ದೇಕಬ್ಬೆ. ಇವಳು ನವಿಲೆನಾಡಿನ ಏಚ ಎಂಬುವವನನ್ನು ಮದುವೆಯಾಗಿರುತ್ತಾಳೆ. ಏಚನು ತನ್ನ ದಾಯಾದಿಗಳ ಮೇಲೆ ಜಗಳವಾಡಿದಾಗ ಅವನನ್ನು ರಾಜನು ತಲಕಾಡಿಗೆ ಕರೆಸಿಕೊಂಡು ಸಾಯಿಸಿದನು. ಈ ವಾರ್ತೆ ಕೇಳಿ ದೇಕಬ್ಬೆ ಚಿತೆಗೆ ಹೋಗುತ್ತಾಳೆ. ಇದು ಈ ಶಾಸನದ ಸಾರಾಂಶ. ಈ ಕಲ್ಲನ್ನು ದೇಕಬ್ಬೆ ತಂದೆಯೇ ಕೆತ್ತಿಸಿ ನಿಲ್ಲಿಸಿದಂತೆ ಹೇಳಿದೆ.

ಇತ್ತೀಚೆಗೆ ಪ್ರೊ. ಪರಮಶಿವಮೂರ್ತಿ ಎಂಬುವವರು ಈ ಶಾಸನವನ್ನು ಪರಿಶೀಲಿಸಿ ಈ ಶಾಸನದ ಹಿಂಬದಿಯಲ್ಲಿ ಶಿಲ್ಪವಿರುವುದನ್ನು ಕಂಡುಹಿಡಿದರು. ಇದೊಂದು ಅದ್ಭುತವೇ ಸರಿ. ಒಂದು ಬದಿ ಶಾಸನ. ಇನ್ನೊಂದು ಬದಿ ಶಿಲ್ಪ.




ಈ ಶಿಲ್ಪವನ್ನು 5 ಭಾಗಗಳಾಗಿ ಶಿಲ್ಪಿ ಕಡೆದಿದ್ದಾನೆ. ಮೊದಲ ಭಾಗದಲ್ಲಿ ದೇಕಬ್ಬೆ (ಚಿತೆ ಏರುವವಳು) ಮೇನೆಯಲ್ಲಿ ಕುಳಿತು ಮೆರವಣಿಗೆಯಲ್ಲಿ ಸಾಗುತ್ತಿದ್ದಾಳೆ. ಹಿಂದೆ ಮುಂದೆ ವಾದ್ಯದವರಿದ್ದಾರೆ. ಪ್ರತಿ ಹಂತದ ಪಟ್ಟಿಕೆಯಲ್ಲಿ ವಿವರಗಳ ಶಾಸನವಿರುವುದು ವಿಶೇಷ.

ಎರಡನೆಯ ಹಂತದಲ್ಲಿ ದೇಕಬ್ಬೆ ದಾನವನ್ನು ಧಾರೆ ಎರೆಯುವ ಮೂಲಕ ನೀಡುತ್ತಿದ್ದಾಳೆ. ಪಾಶುಪತಿ ಸನ್ಯಾಸಿ (ಬಾಣರಾಸಿ)? ದಾನವನ್ನು ಸ್ವೀಕರಿಸಿದ ನಂತರ ಅವನ ಹಿಂದೆ ಬ್ರಾಹ್ಮಣರು, ಹೆಂಗಸರು ದಾನವನ್ನು ಸ್ವೀಕರಿಸುತ್ತಿದ್ದಾರೆ. ಶಾಸನದ ವಿವರಣೆಯಂತೆ ಭೂಮಿ, ಸ್ವರ್ಣ, ಗೋ, ಬಟ್ಟೆ, ಧನದಾನವನ್ನು ಈಕೆ ನೀಡಿದಂತೆ ಹೇಳಿದ್ದು, ಈ ಪಟ್ಟಿಕೆ ಅದಕ್ಕೆ ಸರಿಹೊಂದುತ್ತದೆ. ಇವೆಲ್ಲವನ್ನು ದಾನ ನೀಡಿ ದೇಕಬ್ಬೆ ಎತ್ತರವಾದ ಅಟ್ಟದ ಮೇಲೆ ಕೈ ಮುಗಿದುಕೊಂಡು ಬೆಂಕಿಗೆ ಬಿದ್ದಂತೆ ಚಿತ್ರಿಸಿದೆ. ಬೆಂಕಿಯ ಜ್ವಾಲೆಗಳನ್ನು ಎತ್ತರವಾಗಿ ಶಿಲ್ಪಿಸಿದೆ.

ಮೂರನೆಯ ಹಂತದಲ್ಲಿ ಬೆಂಕಿಯಲ್ಲಿ ಆತ್ಮಾಹುತಿಯಾದ ದೇಕಬ್ಬೆಯನ್ನು ಸ್ವರ್ಗದ ಸ್ತ್ರೀಯರು ಪುಷ್ಪಕವಿಮಾನದಲ್ಲಿ ಸ್ವರ್ಗಕ್ಕೆ ತೆಗೆದುಕೊಂಡು ಹೋಗುತ್ತಿದ್ದಾರೆ. ಈಕೆಯ ವಿಮಾನವನ್ನು ವಾದ್ಯಗಳ ಮೆರವಣಿಗೆಯಲ್ಲಿ ತೆಗೆದುಕೊಂಡು ಹೋಗುತ್ತಿದೆ. ಸ್ವರ್ಗದ ಬಾಗಿಲಲ್ಲಿ ಸ್ವರ್ಗದ ಸ್ತ್ರೀಯರು ಈಕೆಯನ್ನು ಪೂರ್ಣಕುಂಭ ಸ್ವಾಗತದೊಂದಿಗೆ ಬರಮಾಡಿಕೊಳ್ಳಲು ಬರುತ್ತಿರುವಂತೆ ಶಿಲ್ಪಿಸಿದೆ.

ನಾಲ್ಕು ಮತ್ತು ಐದನೆಯ ಹಂತಗಳು ದೇಕಬ್ಬೆ ತ್ರಿಮೂರ್ತಿಗಳು ಹಾಗೂ ಸರಸ್ವತಿ, ಕುಮಾರ, ಶಿವ ಮತ್ತು ಪಾರ್ವತಿ ಮತ್ತು ಗಣಪತಿದೇವರುಗಳನ್ನು ಅವರವರ ವಾಹನಗಳೊಂದಿಗೆ ಬಿಡಿಸಿದ್ದು ದೇಕಬ್ಬೆ ಕೈಮುಗಿದುಕೊಂಡಿರುವಂತೆ ಬಿಡಿಸಲಾಗಿದೆ. ಇದರ ಕಾಲ ಕ್ರಿ.ಶ.1057.

ಈ ಮಾಸ್ತಿ ಶಾಸನಶಿಲ್ಪವು ಇಡೀ ಭಾರತದಲ್ಲಿ ದೊರೆತಿರುವ ಏಕೈಕ ಉದಾಹರಣೆಯಾಗಿದೆ. ಭಾರತದ ಮಾಸ್ತಿಶಿಲ್ಪಕ್ಕೆ ಕರ್ನಾಟಕ ನೀಡಿದ ಹೆಮ್ಮೆಯ ಕೊಡುಗೆ ಇದಾಗಿದೆ.

ಚಿತ್ರ: ಡಾ. ಡಿ.ವಿ. ಪರಮಶಿವಮೂರ್ತಿ
ವಿವರಣೆ: ಡಾ. ದೇವರಕೊಂಡಾರೆಡ್ಡಿ

**ಬೇಗೂರು ವೀರಗಲ್ಲು, ಬೆಂಗಳೂರು ಜಿಲ್ಲೆ (Herostone of Beguru, Bengaluru District)**

ಕ್ರಿ.ಶ.9–10ನೆಯ ಶತಮಾನದಲ್ಲಿನ ಯುದ್ಧ ಹೇಗೆ ನಡೆಯುತ್ತಿರಬಹುದೆಂಬ ವಿವರಗಳನ್ನು ನಮಗೆ ಆ ಕಾಲದ ಪಂಪಭಾರತ, ಗದಾಯುದ್ಧ ಮೊದಲಾದ ಕನ್ನಡ ಕಾವ್ಯಗಳು ಸ್ವಲ್ಪ ಮಟ್ಟಿಗೆ ವರ್ಣಿಸುತ್ತವೆ. ಈ ವರ್ಣನೆ ಓದಿದಾಗ ನಮ್ಮದೇ ಆದ ರೀತಿಯಲ್ಲಿ ನಾವು ಅರ್ಥೈಸಿಕೊಳ್ಳುತ್ತೇವೆ. ಪ್ರಾಚೀನ ಯುದ್ಧದ ಕಲ್ಪನೆಯಿಲ್ಲದ ನಮಗೆ ವಾಸ್ತವತೆ ಹೇಗೆ ಅರಿವಿಗೆ ಬರಬೇಕು?

ಇಂತಹ ಕೊರತೆಯನ್ನು ಇಂದಿನ ಬೆಂಗಳೂರಿನ ಭಾಗವೇ ಆಗಿರುವ ಬೇಗೂರು ಗ್ರಾಮದಲ್ಲಿ ದೊರೆತಿರುವ ವೀರಗಲ್ಲು ನೀಗಿಸುವಂತಿದೆ. ಸುಮಾರು 6' ಅಗಲ 6 1/2' ಎತ್ತರವಾದ ಚಪ್ಪಡಿಯಲ್ಲಿ ಬಿಡಿಸಿರುವ ಯುದ್ಧದ ಚಿತ್ರಣ ಅಂದಿನ ಕಾಲದ ಯುದ್ಧದ ರೀತಿ, ಬಳಸುತ್ತಿದ್ದ ಆಯುಧಗಳು, ಪ್ರಾಣಿಗಳು, ಹೋರಾಟದ ರೀತಿ, ಸಾವು, ಯುದ್ಧದ ಬಗೆಗಿನ ನಂಬಿಕೆಗಳು, ಗಾಯಗೊಂಡವರ ಪರಿಸ್ಥಿತಿ, ಕೇಳುವವರಿಲ್ಲದ ಹೆಣ; ತುಂಡಾಗ ಕೈಕಾಲುಗಳು, ಕುದುರೆ ಸವಾರರು, ಆನೆಗಳ ಬಳಕೆ ಮೊದಲಾದ ವಿವರಗಳನ್ನು ನೀಡುತ್ತದೆ.




ವೀರಗಲ್ಲು ಮುಖ್ಯವಾಗಿ ಎರಡು ಹಂತಗಳಲ್ಲಿ ರಚನೆಗೊಂಡಿದೆ. ಕೆಳಗಡೆಯ ಹಂತದಲ್ಲಿ ಯುದ್ಧಭೂಮಿ, ಯುದ್ಧದ ಭೀಕರತೆ, ಹೋರಾಟ ಮೊದಲಾದವುಗಳನ್ನು ಸೂಚಿಸಿದ್ದರೆ ಮೇಲಿನ ಹಂತದಲ್ಲಿ ಯುದ್ಧದಲ್ಲಿ ಸತ್ತು ವೀರ ಸ್ವರ್ಗದಲ್ಲಿ ಕುಳಿತಿರುವಂತೆಯೂ, ಅವನ್ನು ಅಪ್ಸರೆಯರು ಓಲೈಸುತ್ತಿರುವಂತೆಯೂ ಹಾಗೂ ಅವನ ಮುಂದೆ ಅಪ್ಸರೆಯರು ವಾದ್ಯದ ಗತಿಗೆ ಕುಣಿಯುತ್ತಿರುವಂತೆ ಬಿಡಿಸಿದೆ.

ಕೆಳಗಿನ ಹಂತವು ಯುದ್ಧವು ಶಿಲ್ಪದ ದೃಷ್ಟಿಯಿಂದ ಮುಖ್ಯವಾದದ್ದು. ಕರ್ನಾಟಕದ ವೀರಗಲ್ಲುಗಳ ರೀತಿಯೆಂದರೆ ವೀರನಾದವನು ಕಲ್ಲಿನ ಬಲಭಾಗದಿಂದ ಅಥವಾ ನಮ್ಮ ಎಡಗಡೆಯಿಂದ ಬಲಗಡೆಗೆ ಮುಖ ಮಾಡಿ ಬರುವಂತೆ ಬಿಡಿಸಿರುತ್ತಾರೆ ಇದು ವಿಶೇಷ. ಅದರಂತೆ ಈ ವೀರಗಲ್ಲಿನಲ್ಲಿ ಸತ್ತ ವೀರ ಗಂಡು ಕುದುರೆಯ ಮೇಲೆ ಕುಳಿತು ಕತ್ತಿಯನ್ನು ಝುಳಪಿಸುತ್ತಾ ತನ್ನ ಸಹ ವೀರರೊಡನೆ ಆನೆಯ ಕಡೆಗೆ ಮುಖ ಮಾಡಿ ಬರುತ್ತಿರುವಂತಿದೆ. ಅವನು ಮುಖ್ಯ ವ್ಯಕ್ತಿ ಎಂಬಂತೆ ಅವನ ತಲೆಯ ಮೇಲೆ ಅಧಿಕಾರ ಸೂಚಕವಾದ ಛತ್ರಿಗಳನ್ನು ಬಿಡಿಸಿದೆ. ಅವರ ಮುಂದೆ ಒಬ್ಬ ವ್ಯಕ್ತಿ ರಣಕಹಳೆ ಊದುತ್ತಿದ್ದಾನೆ. ಅವನ ಕಡೆಯ ಸೈನಿಕರು ಆನೆಯ ಕಡೆಗೆ ಕತ್ತಿ–ಗುರಾಣಿ ಹಿಡಿದು ನುಗ್ಗುತ್ತಿದ್ದಾನೆ. ಮುಖ್ಯ ವೀರ ಅಥವಾ ಕುದುರೆ ಸವಾರನ ಹಿಂದೆ ಇನ್ನೂ ಎರಡು ಕುದುರೆಗಳು ಹಾಗೂ ವೀರರನ್ನು ಬಿಡಿಸಿದ್ದಾರೆ. ಇದು ಒಂದು ಕಡೆಯಾದರೆ ವೀರನಿಗೆ ಅಭಿಮುಖವಾಗಿ ಅಂದರೆ ಕಲ್ಲಿನ ಎಡಗಡೆಯಿಂದ ಅಥವಾ ನಮ್ಮ ಬಲಗಡೆಯಿಂದ ಆನೆಯೊಂದು ರಭಸದಿಂದ ನುಗ್ಗಿಬರುತ್ತಿದೆ. ಇದನ್ನು ಮಾವಟಿಗನೊಬ್ಬ ಅಂಕುಶದಿಂದ ನಿಯಂತ್ರಿಸುತ್ತಿದ್ದಾನೆ. ಅವನ ಹಿಂದೆ ಹೌದಾದಲ್ಲಿ ಕುಳಿತ ವೀರ ಬಿಲ್ಲು ಹಿಡಿದು ಬಾಣಪ್ರಯೋಗ ಮಾಡುತ್ತಿದ್ದಾನೆ. ಆನೆಯ ಕುಂಭಸ್ಥಳಕ್ಕೆ ಅನೇಕ ಬಾಣಗಳು ನಾಟಿಕೊಂಡಿದ್ದು ಆನೆ ಮುನ್ನುಗ್ಗಿ ಬರದಂತೆ ತಡೆದುದರ ಸೂಚಕ ಇದಾಗಿದೆ. ಆನೆಯ ಮುಂದೆ ವೀರನೊಬ್ಬ ಉದ್ದದ ಭರ್ಜಿ ಹಿಡಿದು ಮುನ್ನುಗ್ಗುತ್ತಿದ್ದಾನೆ. ಆನೆ ರೋಷದಿಂದ ಸೊಂಡಿಲಲ್ಲಿ ಒಬ್ಬನನ್ನು ಎತ್ತಿ ಎಸೆದಿದೆ. ಇನ್ನೊಬ್ಬನನ್ನು ಸೊಂಡಿಲಿನಲ್ಲಿ ಹಿಡಿದುಕೊಂಡಿದೆ. ಮತ್ತೊಬ್ಬನನ್ನು ಕಾಲಿನಿಂದ ತುಳಿಯುತ್ತಿರುವಂತಿದೆ. ಬಹುಶಃ ಒಂದೇ ಕ್ರಿಯೆಯನ್ನು ಮೂರು ಹಂತಗಳಲ್ಲಿ ತೋರಿಸಿರುವಂತಿದೆ.

ಶಾಸನದ ಕೆಳಭಾಗದಲ್ಲಿ ಕುದುರೆ ಮತ್ತು ಆನೆಗಳ ಸಾಲು ಭಾರತದ ಯುದ್ಧಸಂಸ್ಕೃತಿಯ ಪ್ರಮುಖ ಭಾಗ. ಎದುರಾಳಿಗಳ ಏಟಿಗೆ ಸಿಲುಕಿ ಚೆಲ್ಲಾಪಿಲ್ಲಿಯಾದ ದೇಹಗಳು. ಛಿದ್ರವಾದ ದೇಹಗಳು, ನೆಲದ ಮೇಲೆ ಬಿದ್ದಿರುವ ಹೆಣಗಳನ್ನು ಬಿಡಿಸಲಾಗಿದೆ. ಯುದ್ಧ ಎಷ್ಟು ಭೀಕರವಾಗಿತ್ತೆಂಬುದನ್ನೂ, ಹೆಣಗಳನ್ನು ಕೇಳುವವರಿಲ್ಲವೆಂಬುದನ್ನೂ ಇನ್ನೂ ಕೆಳಹಂತದಲ್ಲಿ ತೋರಿಸಲು ಶಿಲ್ಪಿ ಪ್ರಯತ್ನಿಸಿದ್ದಾನೆ. ಇದು ಭೀಭತ್ಸದೃಶ್ಯ. ದಿಕ್ಕಿಲ್ಲದ ಹಾಗೂ ಕೊಳೆತ ಹೆಣಗಳನ್ನು ತಿನ್ನಲು ಹದ್ದು, ಕಾಗೆಗಳು ಬಂದಿವೆ. ಕೆಳಹಂತದಲ್ಲಿ ಬಿದ್ದಿರುವ ಹೆಣದ ಕಣ್ಣನ್ನು ಕಾಗೆ ಕುಕ್ಕುತ್ತಿದೆ. ನಾಯಿ ಅಥವಾ ನರಿಯೊಂದನ್ನು ಬಿಡಿಸಿದ್ದು ಕತ್ತರಿಸಿ ಬಿದ್ದಿರುವ ತಲೆಯನ್ನು ತಿನ್ನುತ್ತಿದೆ.

ಇವೆಲ್ಲಕ್ಕಿಂತ ಭಿನ್ನವಾದ ದೃಶ್ಯವೊಂದಿದೆ. ಅದನ್ನು ಆನೆಯ ಹಿಂಬದಿ ಮತ್ತು ಕೆಳಬದಿಯಲ್ಲಿ ನೋಡಿ. ಗಾಯಗೊಂಡಿರುವ ವ್ಯಕ್ತಿಯನ್ನು Structure ನಲ್ಲಿ ಮಲಗಿಸಿ ತೆಗೆದುಕೊಂಡು ಹೋಗುತ್ತಿದ್ದಾರೆ. ಹಿಂದೂಗಳ ಕಲ್ಪನೆಯಂತೆ ರಣರಂಗದಲ್ಲಿನ ಹೆಣಗಳನ್ನು ತಿನ್ನಲು, ರಕ್ತ ಕುಡಿಯಲು ಶಾಕಿನಿ ಡಾಕಿನಿಯರು ಬಂದಿದ್ದು, ಹೆಣವೊಂದನ್ನು ಮೇಲೆತ್ತಿ ನಿಂತಿರುವಂತೆ ಬಿಡಿಸಿದೆ. ಇವರು ಆನೆಯ ಹಿಂದೆ ನಿಂತಿರುವುದನ್ನು ಗಮನಿಸಿದಲ್ಲಿ ವೀರನ ವಿರೋಧಿ ಸೈನ್ಯವು ಹೆಚ್ಚಿನ ನಷ್ಟಕ್ಕೆ ಒಳಗಾಗಿರುವುದನ್ನು ಸೂಚಿಸುತ್ತದೆ. ಸತ್ತ ವೀರನ ಕಡೆಗೆ ಜಯಲಕ್ಷ್ಮಿಯು ಒಲಿದಿದ್ದಾಳೆಂಬುದನ್ನು ಸೂಚಿಸಲು ವೀರಗಲ್ಲಿನ ಮೇಲೆ ಎಡ ಮೂಲೆಯಲ್ಲಿ ರಣಭೈರವಿಯನ್ನು ಬಿಡಿಸಲಾಗಿದೆ. ಧ್ವಜವೊಂದನ್ನು ಬಿಡಿಸಿದ್ದು, ಆ ಧ್ವಜದ ಕೆಳಗೆ ರಣಭೈರವಿ ಮಾನವ ಕಪಾಲವನ್ನು ಹಿಡಿದುಕೊಂಡು ನಿಂತಿದ್ದಾಳೆ. ಬಲಕೈಲಿ ಡಮರುಗವಿದೆ. ಶತ್ರುಗಳ ಕಡೆಗೆ ನೋಡುತ್ತಿರುವಂತೆ ಬಿಡಿಸಲಾಗಿದೆ.

ಇಂತಹ ವೀರಗಲ್ಲು ಶಿಲ್ಪವು ಭಾರತದಲ್ಲಿ ಬೇರೆಲ್ಲಿಯೂ ಇಲ್ಲ. ಇದು ಕರ್ನಾಟಕದಲ್ಲಿ ಮಾತ್ರ ಕಂಡುಬಂದಿರುವ ಅಪರೂಪದ ಕೃತಿಯಾಗಿದೆ. ಇದರಲ್ಲಿ ಶಾಸನವೂ ಇದೆ. ಇದೊಂದು ಶಿಲ್ಪಕಾವ್ಯ. ಅದರ ಪ್ರಕಾರ ದಕ್ಷಿಣ ಕರ್ನಾಟಕದಲ್ಲಿ ಆಳ್ವಿಕೆ ನಡೆಸಿದ ಗಂಗರಾಜ ಎರೆಯಪ್ಪ ನೀತಿಮಾರ್ಗನ ಆಣತಿಯಂತೆ ನಾಗತ್ತರನೆಂಬ ವೀರನು ನೊಳಂಬರಾಜ ಮಹೇಂದ್ರನ ಮೇಲೆ ತುಂಬೆಪಾಡಿಯಲ್ಲಿ (ಕೊರಟಗೆರೆ ತಾಲೂಕಿನ ತುಂಬಾಡಿ) ನಡೆದ ಯುದ್ಧದಲ್ಲಿ ಸತ್ತ ವಿವರವಿದೆ. ಈ ಶಾಸನದ ಕಾಲ ಕ್ರಿ.ಶ.910.

ಇದೇ ರೀತಿಯ ವಿವರವಿರುವ ವೀರಗಲ್ಲುಗಳು ಕರ್ನಾಟಕದ ಕೋಲಾರದ ಕೋಲಾರಮ್ಮನ ದೇವಾಲಯದಲ್ಲಿ, ಶ್ರೀನಿವಾಸಪುರ ತಾಲೂಕಿನ ನಂಬಿಹಳ್ಳಿಯಲ್ಲಿ ದೊರೆತಿವೆ. ಆದರೆ ಬೇಗೂರು ವೀರಗಲ್ಲಿನಲ್ಲಿರುವಷ್ಟು ವಿವರಗಳು ಇದರಲ್ಲಿ ಇಲ್ಲ.

ಈಗ ಈ ವೀರಗಲ್ಲು ಬೆಂಗಳೂರು ಮ್ಯೂಸಿಯಂನಲ್ಲಿ ರಕ್ಷಿತವಾಗಿದೆ.

**ದೇವರಕೊಂಡಾರೆಡ್ಡಿ**